# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ಹೊಂಬೇಗೌಡ ನಗರ ವಾರ್ಡ್ – 145 ರಲ್ಲಿ ವಾರ್ಡ್ ಸಮಿತಿ ಸಭೆಯನ್ನು **ಶ್ರೀಮತಿ.ಲಕ್ಷ್ಮೀದೇವಿ** ಉಪ ಆಯುಕ್ತರು ಕಂದಾಯ(ದಕ್ಷಿಣ), ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣ್ಣೆ ಮೇರೆಗೆ ದಿನಾಂಕ: 20.02.2021 ರಂದು ಶನಿವಾರ ಬೆಳಗ್ಗೆ 11.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಸಮಿತಿ ಸದಸ್ಯರಿಗೆ ಆಹ್ವಾನ ನೀಡಿದ್ದು ಸಭೆಗೆ ಹಾಜರಾಗಿರುವ ಸದಸ್ಯರಿಗೆ ಸ್ವಾಗತ ಕೋರುತ್ತಾ ಸಭೆಯ ವಾರ್ಡ್ ಸಮಿತಿ ಅಧ್ಯಕ್ಷರಾದ **ಶ್ರೀಮತಿ.ಲಕ್ಷ್ಮೀದೇವಿ** ರವರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

| ಹಾಜರಿದ್ದವರು | ಗೈರು ಹಾಜರಾತಿ |
|---|---|
| 1) ಉಪ ಆಯುಕ್ತರು (ದಕ್ಷಿಣ) ವಾರ್ಡ್–145 ನೋಡಲ್ ಅಧಿಕಾರಿ.<br>2) ವಾರ್ಡ್ 145 ಕ್ಕೆ ಸಂಬಂಧಪಟ್ಟಂತ AE, TI, BWSSB, Horticulture, Ward-145 Marshalls & Traffic Department.<br>3) ವಿನಾಯಕ ಬಳಗದ ಸಂಘದವರು. | 1. Forest, BESCOM, HI, SHI, Assessor, Electrical & Police Department.<br>2. Garbage Contractor. |

**=**=**

1. **<u>BWSSB</u>:-**

- ಸುಧಾಮನಗರ ವ್ಯಾಪ್ತಿಯಲ್ಲಿ ಒಳಚರಂಡಿ ಹಾಗೂ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿರುವ ಬಗ್ಗೆ ಹಿಂದಿನ ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ್ದ ಮೇರೆಗೆ **BWSSB** ಇಲಾಖೆಯ ಸಂಬಂಧಪಟ್ಟ **AE** ರವರಿಗೆ ಸೂಕ್ತ ಕ್ರಮವಹಿಸಲು ಸೂಚಿಸಲಾಯಿತು.
- **BWSSB** ಇಲಾಖೆಯ ವಾರ್ಷಿಕ ಕಾರ್ಯ ಯೋಜನೆಗಳ ಬಗ್ಗೆ ಹಾಗೂ **Budget** ಬಗ್ಗೆ ವಿವರವಾದ ಮಾಹಿತಿ ನೀಡಲು ಸೂಚಿಸಲಾಯಿತು.
- ಪ್ರತಿ ದಿನ **BWSSB** ಇಲಾಖೆಗೆ ಸಂಬಂಧಪಟ್ಟ ಸಿಬ್ಬಂಧಿರವರು ತಮ್ಮ ವ್ಯಾಪ್ತಿಯಲ್ಲಿ **Field Inspection** ನಡೆಸಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಕಾರ್ಯಚರಣೆಗೆ ಒತ್ತು ನೀಡಲು ಸೂಚಿಸಲಾಯಿತು .

2. **<u>ವಿದ್ಯುತ್</u>:-**

- ಸುಧಾಮನಗರ ವ್ಯಾಪ್ತಿಯಲ್ಲಿ ಹಲವೆಡೆ ವಿದ್ಯುತ್ ಕಂಬಗಳಲ್ಲಿನ ಬೀದಿ ದೀಪ ಸರಿಯಾಗಿ ಕಾರ್ಯ ನಿರ್ವಹಿಸದ ಬಗ್ಗೆ ಹಿಂದಿನ ಸಭೆಯಲ್ಲಿ ತಿಳಿಸಿದ್ದ ಮೇರೆಗೆ ಆ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಬದಲಾಯಿಸಿ ಕಾರ್ಯ ನಿರ್ವಹಿಸುವಂತ ಬೀದಿ ದೀಪಗಳನ್ನು ಅಳವಡಿಸಲಾಗಿದೆ.

**ಪು.ತಿ.ನೋ.,**

Scanned with CamScanner

- ಬಂಡೆ ಸ್ಲಂ ವ್ಯಾಪ್ತಿಯಲ್ಲಿನ ವಿದ್ಯುತ್ ಕಂಬಗಳಲ್ಲಿ ದೀಪಗಳು ಇಲ್ಲದಿರುವುದು ಹಾಗೂ ಒಂದು ವಿದ್ಯುತ್ ಕಂಬ ಬೀಳುವ ಸ್ಥಿತಿಯಲ್ಲಿರುವುದು ಕಂಡು ಬಂದಿರುವುದನ್ನು ತಿಳಿಸಿರುತ್ತಾರೆ. ಆದ್ದರಿಂದ ಸಂಬಂಧಪಟ್ಟ ಸಿಬ್ಬಂಧಿಯವರು ಕೂಡಲೇ ಅಗತ್ಯ ಕ್ರಮವಹಿಸಲು ಸೂಚಿಸಲಾಯಿತು.
- ಖಾಲಿ ಇರುವಂಥ ವಾಸದ ಮನೆಗೆ ವಿದ್ಯುತ್ ಬಿಲ್ ಬಹಳ ಜಾಸ್ತಿ ಬಂದಿರುವ ಬಗ್ಗೆ ಸಂಬಂಧಪಟ್ಟ ಸಿಬ್ಬಂಧಿಯವರಿಂದ ಈ ಬಗ್ಗೆ ವಿಚಾರಿಸಿ ಸೂಕ್ತ ಮಾಹಿತಿಯನ್ನು ಒದಗಿಸುವಂತೆ ಸೂಚಿಸಲಾಯಿತು.

3. <u>ಕಾಮಗಾರಿ ವಿಭಾಗ</u>:-

- ಅಣ್ಣೀಪುರ ಮುಖ್ಯ ರಸ್ತೆಯಲ್ಲಿ ರಸ್ತೆ ನಿರ್ಮಾಣ ಕಾರ್ಯದ ಬಗ್ಗೆ ಚರ್ಚಿಸಲಾಯಿತು.
- ರಸ್ತೆ ನಿರ್ಮಾಣ ಕಾರ್ಯ ಪ್ರಾರಂಭಿಸುವ ಮೊದಲು **BWSSB** ಇಲಾಖೆಯ ವತಿಯಿಂದ ಆ ವ್ಯಾಪ್ತಿಯ ರಸ್ತೆಗಳಲ್ಲಿ **BWSSB** ವತಿಯಿಂದ ಕಾರ್ಯ ಯೋಜನೆ ಇರುವ ಬಗ್ಗೆ ಮಾಹಿತಿ ಪಡೆದು ರಸ್ತೆ ನಿರ್ಮಾಣ ಕಾರ್ಯ ಕೈಗೊಳ್ಳಲು ಕ್ರಮವಹಿಸುವಂತೆ ಸಂಬಂಧಪಟ್ಟ ಸಿಬ್ಬಂಧಿಯವರಿಗೆ ಸೂಚಿಸಲಾಯಿತ್ತು.
- ಅಣ್ಣೀಪುರ ಮುಖ್ಯ ರಸ್ತೆಯಲ್ಲಿನ ರಸ್ತೆಯ ಕಂಬಿಗಳು ಹೊರಬಂದಿರುವುದು ಕಂಡು ಬಂದಿದ್ದು ಕೂಡಲೇ ಸಂಬಂಧಪಟ್ಟ ಸಿಬ್ಬಂಧಿಯವರಿಗೆ ಕಂಬಿಗಳನ್ನು ಕಟಾವುಗೊಳಿಸಲು ಸೂಚಿಸಲಾಯಿತ್ತು.
- ವಾರ್ಡ್-145 ಹೊಂಬೇಗೌಡನಗರ ವ್ಯಾಪ್ತಿಯಲ್ಲಿ ಈ ಹಿಂದಿನ ಸಭೆಗಳಲ್ಲಿ ತಿಳಿಸಿರುವಂತೆ ಹಲವು ರಸ್ತೆಗಳಲ್ಲಿ ಡೆಬ್ರೀಸ್ ತಂದು ಹಾಕಿರುವುದು ಕಂಡು ಬಂದಿರುತ್ತದೆ, ಕೂಡಲೇ ಸ್ಕಿಲ್ಟ್ ಟ್ರಾಕ್ಟರ್ ಮುಖಾಂತರ ಡೆಬ್ರೀಸ್‌ನ್ನು ತೆರೆವುಗೊಳಿಸಲು ಕ್ರಮವಹಿಸುವಂತೆ ಸೂಚಿಸಲಾಯಿತು.

4. <u>ಟ್ರಾಫಿಕ್ ವಿಭಾಗ</u>:-

- ಸುಧಾಮನಗರ 8ನೇ ಕ್ರಾಸ್, ರಸ್ತೆಯಲ್ಲಿನ ಮನೆಯಲ್ಲಿ ಎಲ್.ಪಿ.ಜಿ ಗ್ಯಾಸ್ ಲೋಡ್/ಅನ್‌ಲೋಡ್ ರಾತ್ರಿ ವೇಳೆಯಲ್ಲಿ ನಡೆಯುತ್ತಿದ್ದು ಲೋಡ್ ಗಾಡಿ ಅಲ್ಲೆ ಪಾರ್ಕಿಂಗ್ ಮಾಡುತ್ತಿರುವುದರಿಂದ ರಸ್ತೆಯಲ್ಲಿ ಸಾರ್ವಜನಿಕರ ಓಡಾಟಕ್ಕೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವ ಬಗ್ಗೆ ತಿಳಿಸಿರುತ್ತಾರೆ, ಸಂಬಂಧಪಟ್ಟ ಸಿಬ್ಬಂಧಿಯವರು ಸೂಕ್ತ ಕ್ರಮಹಿಸಲು ಸೂಚಿಸಲಾಗಿದೆ.
- ಬಿ.ಟಿ.ಎಸ್ ರಸ್ತೆಯಿಂದ ಆಡುಗೋಡಿ ರಸ್ತೆಯವರೆಗೆ ರಸ್ತೆಯ ಇಕ್ಕೆಲಗಳಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಿರುವುದರಿಂದ ಬೇರೆ ವಾಹನಗಳ ಸಂಚಾರಕ್ಕೆ ತೊಂದರೆಯಾಗಿ ಟ್ರಾಫಿಕ್ ಜಾಮ್ ಹೆಚ್ಚಾಗಿರುತ್ತದೆ, ರಸ್ತೆಯ ಒಂದೇ ಬದಿಯಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಿಸುವುದು ಹಾಗೂ ಟೋಯಿಂಗ್ ವಾಹನ ಮುಖೇನ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಸೂಚಿಸಲಾಗಿದೆ.

ಪು.ತಿ.ನೋ.,

Scanned with CamScanner

- ಅನವಶ್ಯಕವಾಗಿ ರಸ್ತೆಯಲ್ಲಿ ನಿಂತಿರುವ ವಾಹನಗಳನ್ನು ತೆಗೆಸಲು ಕ್ರಮವಹಿಸುವಂತೆ ಟ್ರಾಫಿಕ್ ಪೊಲೀಸ್ ಸಿಬ್ಬಂಧಿಯವರಿಗೆ ಸೂಚಿಸಲಾಗಿದೆ.
- **Electrical Burial Ground** ಬಳಿ ಮಸೀದಿ ಹಾಗೂ ದೇವಸ್ಥಾನವಿರುವುದರಿಂದ ರಸ್ತೆಯಲ್ಲಿ ಪೂಜಾ ಸಾಮಗ್ರಿ ಅಂಗಡಿಗಳನ್ನು ತೆರೆದಿರುವುದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿರುತ್ತದೆ. ಕೂಡಲೇ ಸೂಕ್ತ ಕ್ರಮವಹಿಸಲು ಸಂಬಂಧಪಟ್ಟ ಸಿಬ್ಬಂಧಿಯವರಿಗೆ ಸೂಚಿಸಲಾಗಿದೆ.
- ಬಿ.ಟಿ.ಎಸ್ ರಸ್ತೆಯಿಂದ ಆಡುಗೋಡಿ ಪೋಸ್ಟ್ ಆಫೀಸ್‌ವರೆವಿಗೂ ಅನಧೀಕೃತ ವಾಹನಗಳು ಹಲವು ರಸ್ತೆಗಳಲ್ಲಿ ನಿಂತಿರುವುದರಿಂದ ಸಾರ್ವಜನಿಕರಿಗೆ ಓಡಾಡಲು ಹಾಗೂ ವಾಹನ ಸಂಚಾರಸ್ಥರಿಗೆ ತೊಂದರೆಯಾಗುತ್ತಿದ್ದು, ಇದರಿಂದಾಗಿ ರಸ್ತೆ ಅಪಘಾತ ಸಂಭವಿಸುವ ಅವಕಾಶವಿರುವುದರಿಂದ ಕೂಡಲೇ ಅವಶ್ಯಕವಾಗಿ ನಿಂತಿರುವ ಹಾಗೂ ಆಡುಗೋಡಿ ಪೋಸ್ಟ್ ಆಫೀಸ್ ಬಳಿ ಎರಡೂ ಕಡೆಯಿಂದ ವಾಹನ ಓಡಾಟವಿರುವ ಪ್ರಯುಕ್ತ ರಸ್ತೆಯು ಚಿಕ್ಕದಾಗಿದ್ದು, ರಸ್ತೆಯ ಅಕ್ಕಪಕ್ಕ ನಿಂತಿರುವ ವಾಹನಗಳಿಂದ ಅಪಘಾತವಾಗುವ ಸಾಧ್ಯತೆ ಇರುವುದರಿಂದ ಬ್ಯಾರಿಕೇಡ್ ಅಳವಡಿಸಿ No-Parking Zone ಎಂದು ನಾಮಫಲಕ ಅಳವಡಿಸಲು ತಿಳಿಸಲಾಯಿತು.

**5. ಪೊಲೀಸ್ ಇಲಾಖೆ:-**

- ಸುಧಾಮನಗರ ವ್ಯಾಪ್ತಿಯಲ್ಲಿನ ಖಾಲಿ ಜಾಗದಲ್ಲಿ ಹಾಗೂ ಹರಿಲಕ್ಷ್ಮೀ ಥಿಯೇಟರ್‌ನ ಪಾಳು ಬಿದ್ದ ಕಟ್ಟಡದಲ್ಲಿ ಈ ಹಿಂದಿನ ಸಭೆಗಳಲ್ಲಿ ಚರ್ಚಿಸಿದಂತೆ ಹಲವು ಅನಗತ್ಯ ಚಟುವಟಿಕೆಗಳು ನಡೆಯುತ್ತಿರುವುದರಿಂದ ಸುತ್ತಮುತ್ತಲಿನ ನಿವಾಸಿಗರಿಗೆ ಬಹಳ ತೊಂದರೆಯಾಗುತ್ತಿರುವ ಬಗ್ಗೆ ತಿಳಿಸಿರುತ್ತಾರೆ. ಆದ್ದರಿಂದ ಕೂಡಲೇ ಸ್ಥಳ ತಪಾಸಣೆ ನಡೆಸಿ ಕೂಲಂಕುಷವಾಗಿ ಪರಿಶೀಲಿಸಿ ಮೊದಲಿಗೆ ತಾತ್ಕಲಿಕ ಪರಿಹಾರ ಕಂಡುಕೊಳ್ಳಲು ಹಾಗೂ ಈ ಸಮಸ್ಯೆಗೆ ಸೂಕ್ತ ಪರಿಹಾರ ನೀಡಲು ಸೂಚಿಸಲಾಯಿತ್ತು.
- ವಿಲ್ಸನ್ ಗಾರ್ಡ್‌ನ್ ವ್ಯಾಪ್ತಿಯ ಪೂರ್ಣಿಮಾ ಹೋಟೆಲ್ ಹಾಗೂ ರಾಣಿ ಪಾರ್ಕ್ ಸುತ್ತಮುತ್ತಲಿನ ರಸ್ತೆಗಳಲ್ಲಿ ದಿನಾಂಕ: 19.02.2021 ರ ರಾತ್ರಿ ವೇಳೆಯಲ್ಲಿ ಬೇರೆಡೆಯಿಂದ ಟ್ರಾಕ್ಟರ್‌ಗಳಲ್ಲಿ ಡೆಬ್ರೀಸ್ ತಂದು ಹಾಕಿರುವುದು ಕಂಡು ಬಂದಿರುತ್ತದೆ. ಸಂಬಂಧಪಟ್ಟಂತೆ ರಾತ್ರಿ ಗಸ್ತಿನಲ್ಲಿರುವ ಪೊಲೀಸ್ ಸಿಬ್ಬಂಧಿಯವರು ಪರಿಶೀಲಿಸಲು ಹಾಗೂ ಸಿ.ಸಿ.ಕ್ಯಾಮೆರ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲು ತಿಳಿಸಲಾಯಿತು.

**6. ಅರಣ್ಯ ವಿಭಾಗ:-**

- ರಾಣಿ ಪಾರ್ಕ್ ಪಕ್ಕದ ರಸ್ತೆಯಲ್ಲಿ ಮರದ ದಿಮ್ಮಿಗಳು ರಸ್ತೆಯಲ್ಲಿ ಬಿದ್ದಿರುವುದರಿಂದ ಸಂಬಂಧಪಟ್ಟ ಸಿಬ್ಬಂಧಿಯವರು ಕೂಡಲೇ ತೆರೆವುಗೊಳಿಸಲು ಕ್ರಮವಹಿಸುವಂತೆ ಸೂಚಿಸಲಾಯಿತ್ತು.

ಪು.ತಿ.ನೋ

Scanned with CamScanner

7. ಆರೋಗ್ಯ ವಿಭಾಗ:-

- ಬಿ.ಟಿ.ಎಸ್ ರಸ್ತೆಯಲ್ಲಿ ಮೀನು ಮಾರಾಟ ಅಂಗಡಿಗಳು ಹೆಚ್ಚಾಗಿದ್ದು ಸುತ್ತಮುತ್ತಲ್ಲಿನ ನಿವಾಸಿಗರಿಗೆ ಹಾಗೂ ವಾಹನ ಸಂಚಾರಸ್ಥರಿಗೆ ತೊಂದರೆಯಾಗುತ್ತಿದ್ದು ಈ ಹಿಂದಿನ ಸಭೆಗಳಲ್ಲಿ ತಿಳಿಸಿರುತ್ತಾರೆ, ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲು SHI ರವರಿಗೆ ಸೂಚಿಸಲಾಯಿತು.

| | |
|---|---|
| ಕಾರ್ಯದರ್ಶಿ ಹಾಗೂ | ಅಧ್ಯಕ್ಷರು ಹಾಗೂ |
| ಸಹಾಯಕ ಅಭಿಯಂತರರು | ನೋಡಲ್ ಅಧಿಕಾರಿ |
| ವಾರ್ಡ್ ಸಂಖ್ಯೆ – 145 | ವಾರ್ಡ್ ಸಂಖ್ಯೆ – 145 |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |

ಪ್ರತಿಯನ್ನು:-

1) ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3) ಮಾನ್ಯ ವಲಯ ಆಯುಕ್ತರುರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
4) ಮಾನ್ಯ ಜಂಟಿ ಆಯುಕ್ತರು (ದಕ್ಷಿಣ)ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
5) ತಂಡದ ಎಲ್ಲಾ ಸಿಬ್ಬಂಧಿರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
6) ಕಛೇರಿ ಕಡತಕ್ಕೆ.

Scanned with CamScanner